ದುರಸ್ತಿಪಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ದುರಸ್ತಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖಾ ವತಿಯಿಂದ ಕೈಗೆತ್ತಿಕೊಳ್ಳಲಾಗಿದೆ

ಇ) ದುರಸ್ತಿ ಕಾಮಗಾರಿಗಳು ಪ್ರಗತಿಯಲ್ಲಿದೆ

ಈ) ಕಳೆದ 3 ವರ್ಷಗಳಲ್ಲಿ ಕ್ರೀಡಾಂಗಣ ನಿರ್ವಹಣೆಗಾಗಿ ಈ ಕೆಳಕಾಣಿಸಿದಂತೆ ಅನುದಾನ ಬಿಡುಗಡೆ ಮಾಡಲಾಗಿದೆ

1 2004–05 ರೂ 50,000 (ರಾಜ್ಯವಲಯ)

2 2005–06 ರೂ 1,30,000 (ಜಿಲ್ಲಾ ಪಂಚಾಯತ್ ಅನುದಾನ)

3 2006–07 ರೂ 2,30 000 (ಜಿಲ್ಲಾ ಪಂಚಾಯತ್ ಅನುದಾನ)

ಈ) ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು

896(899) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಧುಗಿರಿ ತಾಲ್ಲೂಕು, ದೊಡ್ಡೇರಿ ಹೋಬಳಿ ಬಡವನಹಳ್ಳಿಯಲ್ಲಿ ಹಾಲಿ ಇರುವ ಔಟ್‌ಪೋಸ್ಟ್ ಠಾಣೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ,

ಆ) ಹಾಗಿದ್ದಲ್ಲಿ ಈ ಬೇಡಿಕೆಯನ್ನು ಈಡೇರಿಸಲು ಸರ್ಕಾರ ಹಾಕಿ ಕೊಂಡಿರುವ ಕಾಲಮಿತಿಯೇನು?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಕಾಲಮಿತಿ ಇರುವುದಿಲ್ಲ

897(1256) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಯುವ ಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರತಿಷ್ಠಿತ ಕ್ರೀಡಾಪಟುಗಳಿಗೆ ನೀಡುವ "ಏಕಲವ್ಯ" ಪ್ರಶಸ್ತಿಯನ್ನು 2002 ರಿಂದ 2006ನೇ ಸಾಲಿನವರೆಗೆ ಪ್ರತಿಬಾರಿಯೂ ಸರಿಯಾಗಿ ನೀಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದಲ್ಲಿ ವಿಳಂಬವಾಗಲು ಕಾರಣಗಳೇನು ಹಾಗೂ ಏಕಲವ್ಯ ಪ್ರಶಸ್ತಿಯ ಜೊತೆಗೆ ಸರ್ಕಾರ ನೀಡುತ್ತಿರುವ ನಗದೆಷ್ಟು,

ಇ) ನಗದನ್ನು ಹೆಚ್ಚಿಸುವ ಪ್ರಸ್ತಾವನೆ ಏನಾದರೂ ಇದೆಯೇ,

ಈ) ಗ್ರಾಮೀಣ ಕ್ರೀಡೆಗಳಾದ ಖೋ–ಖೋ, ಕಬಡ್ಡಿ ಕ್ರೀಡೆಗೆ 2004, 2005, 2006ರ ಸಾಲಿನ ಏಕಲವ್ಯ ಪ್ರಶಸ್ತಿಗಳನ್ನು ಪ್ರಕಟಿಸದಿರಲು ಕಾರಣಗಳೇನು,

ಉ) ಯಾವಾಗ ನೀಡಲಾಗುವುದು?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಅ) ಆಯವ್ಯಯ ಹಂಚಿಕೆಯಾಗದ ಕಾರಣ ಪ್ರತಿ ವರ್ಷ ಏಕಲವ್ಯ ಪ್ರಶಸ್ತಿಯನ್ನು ನೀಡಿರುವುದಿಲ್ಲ ಪ್ರಸ್ತುತ ಸಾಲಿನಲ್ಲಿ ಆಯವ್ಯಯದಲ್ಲಿ ಹಣವನ್ನು ಒದಗಿಸಿರುವುದರಿಂದ 2002, 2003 ಮತ್ತು 2004ನೇ ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆಗೈದ ಕ್ರೀಡಾಪಟುಗಳಿಗೆ ನಿಯಮಾನುಸಾರ ಪ್ರತಿಷ್ಠಿತ "ಏಕಲವ್ಯ" ಪ್ರಶಸ್ತಿಯನ್ನು ನೀಡಲು ಏಕಲವ್ಯ ಪ್ರಶಸ್ತಿ ಆಯ್ಕೆ ಸಮಿತಿ ಆಯ್ಕೆ ಮಾಡಿ ಈಗಾಗಲೇ ಹೆಸರುಗಳನ್ನು ಪ್ರಕಟಿಸಲಾಗಿದೆ

2005ನೇ ಸಾಲಿಗೆ ಸಂಬಂಧಿಸಿದಂತೆ ಏಕಲವ್ಯ ಪ್ರಶಸ್ತಿಯನ್ನು ನೀಡುವ ಸಲುವಾಗಿ ಅರ್ಹ ಕ್ರೀಡಾಪಟುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಬಂದಿರುವ ಅರ್ಜಿಗಳು ಪರಿಶೀಲನೆಯ ಹಂತದಲ್ಲಿರುತ್ತವೆ

2006ನೇ ಸಾಲಿಗೆ ಸಂಬಂಧಿಸಿದಂತೆ ಮುಂದಿನ ವರ್ಷದಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು

ಆ) ಆಯವ್ಯಯ ಹಂಚಿಕೆಯಾಗದ ಕಾರಣ ಈ ಹಿಂದೆ ಏಕಲವ್ಯ ಪ್ರಶಸ್ತಿಯನ್ನು ನೀಡಿರುವುದಿಲ್ಲ ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಯು ರೂ 50,000/– ಗಳ ನಗದು, ಏಕಲವ್ಯ ಕಂಚಿನ ಪ್ರತಿಮೆ, ಬ್ಲೇಜರ್ ಮತ್ತು ಟೈ ಒಳಗೊಂಡಿರುತ್ತದೆ

ಇ) ಇಲ್ಲ

ಈ) 2002, 2003ನೇ ಸಾಲುಗಳಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳ ಲಭ್ಯತೆಯ ಮೇರೆಗೆ ಏಕಲವ್ಯ ಪ್ರಶಸ್ತಿಗಳನ್ನು ಗ್ರಾಮೀಣ ಕ್ರೀಡೆಗಳಾದ ಖೋ–ಖೋ ಮತ್ತು ಕಬಡ್ಡಿ ಕ್ರೀಡೆಗಳಿಗೆ ನೀಡಿ ಪ್ರಕಟಿಸಲಾಗಿದೆ ಸರ್ಕಾರೀ ಆದೇಶದ ಪ್ರಕಾರ 40 ಕ್ರೀಡೆಗಳಲ್ಲಿ ಪ್ರತಿ ವರ್ಷಕ್ಕೆ ಕೇವಲ 15 ಕ್ರೀಡಾಪಟುಗಳಿಗೆ ಮಾತ್ರ ಏಕಲವ್ಯ ಪ್ರಶಸ್ತಿಯನ್ನು ನೀಡಲು ಅವಕಾಶ ಇದೆ 2004ನೇ ಸಾಲಿನಲ್ಲಿ ಹಿಂದಿನ ವರ್ಷಗಳಲ್ಲಿ ಪರಿಗಣಿಸಲು ಸಾಧ್ಯವಾಗದ ಕ್ರೀಡೆಗಳಿಗೆ ಅವಕಾಶ ನೀಡಿರುವುದರಿಂದ ಆ ವರ್ಷದಲ್ಲಿ ಮಾತ್ರ ಕಬಡ್ಡಿ ಮತ್ತು ಖೋ–ಖೋಗೆ

ನೀಡಿರುವುದಿಲ್ಲ 2005, 2006ರಲ್ಲಿ ಕಬಡ್ಡಿ ಮತ್ತು ಖೋ-ಖೋ ಕ್ರೀಡೆಗಳನ್ನು ನಿಯಮಾನುಸಾರ ಪರಿಗಣಿಸಲಾಗುವುದು

ಉ) 2005ನೇ ಸಾಲಿಗೆ ಸಂಬಂಧಿಸಿದಂತೆ ಏಕಲವ್ಯ ಪ್ರಶಸ್ತಿಗಾಗಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಲಾಗುತ್ತಿದ್ದು ಆ ಸಮಯದಲ್ಲಿ ಇದನ್ನು ಪರಿಗಣಿಸ ಲಾಗುವುದು 2006ನೇ ಸಾಲಿಗೆ ಸಂಬಂಧಿಸಿದಂತೆ ಏಕಲವ್ಯ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಅನಂತರ ಕ್ರಮ ಕೈಗೊಳ್ಳಲಾಗುವುದು

898(1163) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಮ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಕೊರತೆ ನೀಗಿಸಲು ಜಪಾನ್ ಸರ್ಕಾರದ ಮಾದರಿಯಲ್ಲಿ ನೈಸರ್ಗಿಕ ಮತ್ತು ಕೃತಕ ವಿದ್ಯುತ್ ಉತ್ಪಾದನೆಗೆ ಸರ್ಕಾರ ಚಿಂತನೆ ನಡೆಸಿದೆಯೇ,

ಆ) ಇದರಿಂದ ಕರ್ನಾಟಕದ ನೆಲ, ಜಲ, ಪರಿಸರ ಮೂರ್ಣ ಉಳಿಸಲು ಸಹಕಾರಿಯಾಗುವುದಿಲ್ಲವೇ?

ಇ) ನೈಸರ್ಗಿಕ ವಿದ್ಯುತ್ ಉತ್ಪಾದನೆಗೆ ಸರ್ಕಾರದ ಬೆಂಬಲ ಸಾಕಷ್ಟು ಇಲ್ಲದಿರುವುದರಿಂದ ಉತ್ಪಾದನೆಯ ಅಭಾವಕ್ಕೆ ಕಾರಣವಾಗಿದೆಯೇ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಜಪಾನ್ ಸರ್ಕಾರ ಉತ್ಪಾದಿಸುವ ನೈಸರ್ಗಿಕ ಮತ್ತು ಕೃತಕ ವಿದ್ಯುತ್‌ನ ವಿವರಗಳನ್ನು ತರಿಸಿಕೊಂಡು ಅವುಗಳನ್ನು ನಮ್ಮ ರಾಜ್ಯದಲ್ಲಿ ಉತ್ಪಾದನೆಗೆ ಬಳಸುವ ಸಾಧ್ಯತೆ ಬಗ್ಗೆ ಚಿಂತನೆ ನಡೆಸಲಾಗುವುದು ನೈಸರ್ಗಿಕ ಮೂಲಗಳಾದ ಪವನ, ಕಿರುಜಲ ಮತ್ತು ಸಹ ಉತ್ಪಾದನೆಗಳಿಂದ ವಿದ್ಯುತ್ ಉತ್ಪಾದನೆಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ

ಆ) ಸಹಕಾರಿಯಾಗುತ್ತದೆ

ಇ) ಇಲ್ಲ ನೈಸರ್ಗಿಕ ಮೂಲಗಳಾದ ಪವನ, ಕಿರುಜಲ, ಸಹ ಉತ್ಪಾದನೆ ಮತ್ತು ಜೈವಿಕಗಳಿಂದ ಖಾಸಗಿ ಅಭಿವೃದ್ಧಿದಾರರಿಂದ ಇದುವರೆಗೆ 1442 ಮೆ ವ್ಯಾ ನಷ್ಟು ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ

900(1165) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಮ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?